ಹೆಚ್‌ಆರ್1-064 10.06.2020

## ಸೂಚನಾ ಪತ್ರ

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಉದ್ಯೋಗಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ 2018-19ನೇ ಸಾಲಿನ ಸಮೂಹ ವೈದ್ಯಕೀಯ ವಿಮಾ ಪಾಲಿಸಿಯು **(Group Medical Insurance Policy)** ದಿನಾಂಕ:31.07.2020ರಂದು ಮುಕ್ತಾಯವಾಗುತ್ತಿದ್ದು 2020-21ನೇ ಸಾಲಿಗೆ ಸಮೂಹ ವೈದ್ಯಕೀಯ ವಿಮೆ ಪಡೆಯಲು ಟೆಂಡರ್ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. ಪ್ರಸ್ತುತ ವಿಮಾ ಪಾಲಿಸಿಯಲ್ಲಿರುವ ಉದ್ಯೋಗಿಗಳು ಮತ್ತು ಅವರ ಅವಲಂಬಿತರ ವಿವರಗಳು ನಿಗಮದ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಎಲ್ಲಾ ಅಧಿಕಾರಿಗಳು/ಉದ್ಯೋಗಿಗಳು ಅಂತರ್ಜಾಲದಲ್ಲಿನ ವಿವರಗಳನ್ನು ನೋಡಿ, ಉದ್ಯೋಗಿಗಳ/ಅವಲಂಭಿತರ ಹೆಸರುಗಳಲ್ಲಿ ವ್ಯಾಕರಣದ ತಿದ್ದುಪಡಿಗಳೇನಾದರೂ ಮಾಡಬೇಕಾದಲ್ಲಿ ಅಥವಾ ಇತರ ಮಾಹಿತಿಗಳಲ್ಲಿ ಯಾವುದಾದರೂ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇದ್ದಲ್ಲಿ, ಆ ಬಗ್ಗೆ ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಮಾನವ ಸಂಪನ್ಮೂಲ ಶಾಖೆಗೆ **ದಿನಾಂಕ:16.06.2020ರ** ಒಳಗೆ ಸಲ್ಲಿಸತಕ್ಕದ್ದು

(1) ಅವಿವಾಹಿತ ಮಹಿಳಾ ಉದ್ಯೋಗಿಗಳು ಈ ಅವಧಿಯಲ್ಲಿ ವಿವಾಹವಾಗಿದ್ದಲ್ಲಿ ತಮ್ಮ ತಂದೆ/ತಾಯಿಯರ ಹೆಸರುಗಳನ್ನು ಅವಲಂಬಿತರ ಪಟ್ಟಿಯಿಂದ ತೆಗೆದುಹಾಕಿ ಪತಿಯ ಹೆಸರನ್ನು ಸೇರಿಸಲು ಅವರ ವಿವರಗಳನ್ನು ಎಲ್ಲಾ ದಾಖಲೆಗಳೊಡನೆ ಸಲ್ಲಿಸತಕ್ಕದ್ದು

(2) ಒಂದು ವೇಳೆ ಉದ್ಯೋಗಿಗಳ ಹೆಣ್ಣುಮಕ್ಕಳು ವಿವಾಹಿತರಾದಲ್ಲಿ ಅವರುಗಳ ಹೆಸರನ್ನು ಅವಲಂಬಿತರ ಪಟ್ಟಿಯಿಂದ ತೆಗೆಯಲು ವಿವರಗಳನ್ನು ಸಲ್ಲಿಸತಕ್ಕದ್ದು

(3) ಉದ್ಯೋಗಿಗಳ ಅವಲಂಬಿತರು ನಿಧನರಾಗಿದ್ದಲ್ಲಿ ಅವರುಗಳ ಹೆಸರನ್ನು ಅವಲಂಬಿತರ ಪಟ್ಟಿಯಿಂದ ತೆಗೆಯಲು ವಿವರಗಳನ್ನು ಸಲ್ಲಿಸತಕ್ಕದ್ದು

(4) ಮಹಿಳಾ ಉದ್ಯೋಗಿಗಳು ಪತಿ ಮತ್ತು ಅವಲಂಬಿತ ಮಕ್ಕಳನ್ನು ಹೊರತುಪಡಿಸಿ ಪೋಷಕರನ್ನು ಈಗ ಅವಲಂಬಿತರ ಪಟ್ಟಿಯಲ್ಲಿ ಸೇರಿಸಬೇಕಾದಲ್ಲಿ ಅವರು ತಮ್ಮೊಡನೆ ವಾಸವಿರುವುದಕ್ಕೆ ಮತ್ತು ಅವಲಂಬಿತರಾಗಿರುವುದಕ್ಕೆ ಸಕ್ಷಮ ಪ್ರಾಧಿಕಾರವು ಸೂಚಿಸುವ ಅಗತ್ಯವಾದ ದಾಖಲೆಗಳನ್ನು ಒದಗಿಸುವುದು. ಮಹಿಳಾ ಉದ್ಯೋಗಿಗಳು ಸಲ್ಲಿಸುವ ಅಗತ್ಯ ದಾಖಲೆಗಳನ್ನು ಪರಿಶೀಲಿಸಿದ ನಂತರ ಅವರುಗಳ ಪೋಷಕರನ್ನು ಅವಲಂಬಿತರ ಪಟ್ಟಿಯಲ್ಲಿ ಸೇರಿಸಲು ಕ್ರಮವಹಿಸಲಾಗುವುದು. ಈ ಬಗ್ಗೆ ಯಾವುದೇ ಸುಳ್ಳು ಮಾಹಿತಿ/ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತಹ ಉದ್ಯೋಗಿಗಳಿಗೆ ವೈದ್ಯಕೀಯ ಮರುಪಾವತಿಯನ್ನು ರದ್ದುಪಡಿಸುವುದಲ್ಲದೆ, ಹಿಂದೆ ಪಾವತಿಸಿರುವ ಮೊತ್ತವನ್ನು ವಸೂಲು ಮಾಡಲಾಗುವುದು ಹಾಗೂ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

(5) 3(ಮೂರು) ಮಕ್ಕಳನ್ನು ವಿಮಾ ಪಾಲಿಸಿಯಲ್ಲಿ ಸೇರಿಸಲು ಅವಕಾಶವಿಲ್ಲದೆ ಇರುವುದರಿಂದ, ಯಾವುದೇ ಅಧಿಕಾರಿಗಳು/ಉದ್ಯೋಗಿಗಳು 3 ಅಥವಾ ಹೆಚ್ಚು ಮಕ್ಕಳನ್ನು ಹೊಂದಿದ್ದಲ್ಲಿ, ಅವರಲ್ಲಿ ಯಾವ 2 ಮಕ್ಕಳ ಹೆಸರುಗಳನ್ನು ವಿಮಾ ಪಾಲಿಸಿಯಲ್ಲಿ ಸೇರಿಸಬೇಕೆಂಬ ವಿವರಗಳನ್ನು ಖುದ್ದು ಉದ್ಯೋಗಿಗಳೇ ಸಲ್ಲಿಸುವುದು. ಇಲ್ಲದಿದ್ದಲ್ಲಿ ಹೆಚ್ಚು ವಯಸ್ಸು ಹೊಂದಿರುವ ಮಕ್ಕಳ ವಿವರಗಳನ್ನು ವಿಮಾ ಪಾಲಿಸಿಯಿಂದ ಕೈಬಿಡಲು ನಿಗಮವೇ ಕ್ರಮವಹಿಸುವುದು. ತದನಂತರ ಯಾವುದೇ ಬದಲಾವಣೆಯ ಕೋರಿಕೆಗಳನ್ನು ಪರಿಗಣಿಸುವುದಿಲ್ಲ.

ಮೇಲಿನ ಪ್ರಕರಣಗಳಲ್ಲಿ ಆಧಾರ್ ಕಾರ್ಡ್ ಗಳನ್ನು ಮಾನ್ಯ ಮಾಡಲಾಗುವುದು ಅಥವಾ ಆಧಾರ್ ಕಾರ್ಡ್ ಪಡೆಯಲು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದು. ಒಂದು ವೇಳೆ ಮೇಲಿನ ಅವಧಿಯೊಳಗೆ ವಿವರಗಳನ್ನು ಸಲ್ಲಿಸದಿದ್ದಲ್ಲಿ, ನಿಗಮದಲ್ಲಿ ಲಭ್ಯವಿರುವ ಮಾಹಿತಿ ಆಧರಿಸಿ ಬದಲಾವಣೆಗಳನ್ನು ಜಾರಿಗೊಳಿಸಲಾಗುವುದು.

ಉದ್ಯೋಗಿಗಳ ಸಮೂಹ ವೈದ್ಯಕೀಯ ವಿಮಾ ಪಾಲಿಸಿಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳು ನಿಗಮದಲ್ಲಿ ಲಭ್ಯವಿದ್ದು, ಸದರಿ ವಿವರಗಳಲ್ಲಿ ಮೇಲೆ ತಿಳಿಸಿರುವಂತೆ ಏನಾದರೂ ಬದಲಾವಣೆಗಳಿದ್ದಲ್ಲಿ ಮಾತ್ರ ವಿವರಗಳನ್ನು ಮಾನವ ಸಂಪನ್ಮೂಲ ವಿಭಾಗಕ್ಕೆ ಸಲ್ಲಿಸತಕ್ಕದ್ದು. ಯಾವುದೇ ಬದಲಾವಣೆಗಳಿಲ್ಲದಿದ್ದಲ್ಲಿ, ಮತ್ತೊಮ್ಮೆ ವಿವರಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. ಮದ್ಯ/ಮದ್ಯಸಾರ ಮಳಿಗೆಗಳಲ್ಲಿನ ಉದ್ಯೋಗಿಗಳು ಬದಲಾವಣೆ ವಿವರಗಳನ್ನು ಅಗತ್ಯ ದಾಖಲೆಗಳೊಂದಿಗೆ mnghr-admin@ksbcl.com ಇ-ಮೇಲ್ ವಿಳಾಸಕ್ಕೆ ಕಳುಹಿಸತಕ್ಕದ್ದು.

**ಅವಲಂಭಿತರು (Declared Dependants) ಎಂದರೆ: ತಂದೆ, ತಾಯಿ, ಪತಿ/ಪತ್ನಿ ಮತ್ತು ಮಕ್ಕಳು**

M. S. [signature]

**ಪ್ರಧಾನ ವ್ಯವಸ್ಥಾಪಕರು**

**(ಆಡಳಿತ & ಮಾಸಂ)**